## ಏನಾಗುತಿದೆ ತಿಳಿಯದಾಗಿದೆ

- **ಗಗನ್ ಆರ್ ಮೈಲೇಶ್ವರ್**

**(ನಿರ್ಮಲರಾಮತನಯ)**

ಬಿ.ಎ ವಿದ್ಯಾರ್ಥಿ,

ಅಲಯನ್ಸ್ ವಿಶ್ವವಿದ್ಯಾಲಯ

ಕಡು ಕತ್ತಲಲ್ಲಿ ಬೆಳಕಿನ ಪಂಜು ನಂದಿದಂತೆ,
ಮುಸ್ಸಂಜೆಯ ಮಂಜು ಕರಗಿ ನೀರಾದಂತೆ,
ಗುಲಾಬಿ ಮುಟ್ಟುವ ಮುನ್ನ,
ಮುಳ್ಳುಗಳು ಕೈ ಪರಚಿದಂತೆ,
ನನ್ನ ಪ್ರೀತಿ ಕನಸಲ್ಲಿ ಹುಟ್ಟಿ,
ಮನಸಲ್ಲಿ ಉಳಿದು, ಕನಸಲ್ಲೇ ಕೊನೆಗೊಂಡಿದೆ.
ಇದು ಮುಸ್ಸಂಜೆಯ ಆರಂಭವೋ,
ಗ್ರಹಣದ ಕಡು ಕತ್ತಲ ಅಂತ್ಯವೋ,
ತಿಳಿಯದೆ ಅಂತರಂಗ ಅಂತರ್ಗತವಾಗಿ:
ಈ ಅಧ್ಯಾಯದ ಆರಂಭವನ್ನು ನೋಡದೇ,
ಅಂತ್ಯ ನೋಡುವ ಭಯದಲ್ಲಿದೆ!